**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,ಹುಣಸೂರು**

**ಸಿಸಿ ನಂ.776/2024**

**ಫಿರ್ಯಾದುದಾರರು:** ಸರ್ಕಾರ (ಹುಣಸೂರು ಪಟ್ಟಣ ಪೋಲೀಸರಿಂದ)

– ವಿರುದ್ಧ –

**ಆರೋಪಿತರು:**

1. ದಿನೇಶ್., ಬಿನ್ ಸಣ್ಣಯ್ಯ,
37 ವರ್ಷ, ಕಾರ್ಮಿಕ,
2. ವಿಜಯಕುಮಾರ, ಬಿನ್ ಸಣ್ಣಯ್ಯ,
35 ವರ್ಷ, ಕಾರ್ಮಿಕ,
3. ಚಂದ್ರ, ಬಿನ್ ಸಣ್ಣಯ್ಯ,
41 ವರ್ಷ, ಕಾರ್ಮಿಕ,
ಎಲ್ಲರೂ ರಂಗನಾಥ ಬಡಾವಣೆ,
ಕಲ್ಲುಣಿಕೆ, ಹುಣಸೂರು ತಾಲ್ಲೂಕು ವಾಸಿಗಳು.

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313ರ ಅಡಿಯಲ್ಲಿ ಆರೋಪಿತರ ಹೇಳಿಕೆ**

| | |
|---|---|
| ಪ್ರಶ್ನೆ 1: | ಅಭಿಯೋಜನೆಯ ಪರವಾಗಿ ವಿಚಾರಣೆಯಾದ ಸಾಕ್ಷ್ಯಗಳನ್ನು ನೀವು ತಿಳಿದುಕೊಂಡಿರುವಿರಾ? |
| ಉತ್ತರ: | ತಿಳಿದಿದೆ |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ 2: | ಪಿ.ಡಬ್ಲ್ಯೂ – 1 ಸ್ವಾಮಿ.ಎಸ್.,ರವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ.2 ಅವರ ತಾಯಿಯಾಗಿದ್ದು, ಚಾಸಾ.3 ಯೋಗೇಶ್, ಚಾಸಾ.4 ಜಯರಾಮ, ಚಾಸಾ.5 ಮಹಾದೇವ ಮತ್ತು ಚಾಸಾ.6 ಸ್ವಾಮಿರವರ ಗೊತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |

| | |
|---|---|
| ಉತ್ತರ: | ಸುಳ್ಳು |
| ಪ್ರಶ್ನೆ 3: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರು ನಿಪಿ.1 ದೂರಿನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ 4: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರು ನಿಪಿ.1 ದೂರಿಗೆ ಆರೋಪಿತರಾದ ನೀವು ಅವರ ಮೇಲೆ ಮಾಡಿದ ಗಲಾಟೆಯ ಸಮಯದಲ್ಲಿ ಕೊಟ್ಟ ದೂರಿಗೆ ಹಾಕಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ 5: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 02.12.2023ರಂದು ಬೆಳಿಗ್ಗೆ 7.30 ಗಂಟೆ ಸಮಯದಲ್ಲಿ ಅವರು ತಮ್ಮ ಮಗನನ್ನು ಕರೆದುಕೊಂಡು ವಾಕಿಂಗ್ ಹೋಗಿದ್ದು, ವಾಕಿಂಗ್ |

| | |
|---|---|
| | ಮುಗಿಸಿಕೊಂಡು ಮನೆಗೆ ವಾಪಾಸ್ಸು ಬರುತ್ತಿರುವಾಗ 1ನೇ ಆರೋಪಿಯಾದ ನೀವು ಹೊಂಡಾ ಶೈನ್ ಬೈಕಿನಲ್ಲಿ ಬಂದು ಅವರಿಗೆ ಗುದ್ದಿದ್ದು, ಅದರಿಂದ ಅವರಿಗೆ ನೋವುಂಟಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/- |
| ಪ್ರಶ್ನೆ 6: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದನ್ನು ಅವರು ಪ್ರಶ್ನೆ ಮಾಡಿದ್ದಕ್ಕೆ 1ನೇ ಆರೋಪಿಯಾದ ನೀವು ಅವರಿಗೆ ಜಾಡಿಸಿ ಒದ್ದ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/- |
| ಪ್ರಶ್ನೆ 7: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆಗ ಅವರು ಮಗನನ್ನು ಕರೆದುಕೊಂಡು ಮನೆಗೆ ಬಂದಿದ್ದು, ಅದೇ ದಿನ ಬೆಳಿಗ್ಗೆ 735 ರಿಂದ 7.40 ಗಂಟೆ ಸಮಯದಲ್ಲಿ ಆರೋಪಿತರಾದ ನೀವು ಅವರ ಮನೆಯ ಬಳಿ ಬಂದು ಅವರ ಮಕ್ಕಳನ್ನು ಉದ್ದೇಶಿಸಿ ಸೂಳೆ ಮಕ್ಕಳಾ ಬೋಳಿ ಮಕ್ಕಳಾ ಎಂದು ಅವಾಚ್ಯ ಶಬ್ದಗಳಿಂದ ಬೈದು, ನಿಮ್ಮ ಅಪ್ಪ ಎಲ್ಲಿದ್ದರೂ ಬಿಡುವುದಿಲ್ಲ, ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/- |

| | |
|---|---|
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ 8: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆಗ ಅವರ ಮಕ್ಕಳು ಅವರ ಬಳಿ ಬಂದು ಯಾರೋ ನಿಮ್ಮನ್ನು ಬೈಯುತ್ತಿದ್ದಾರೆ ಬನ್ನಿ ಎಂದು ಕರೆದಿದ್ದು, ಆಗ ಅವರು ಮನೆಯಿಂದ ಹೊರಗೆ ಬಂದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ 9: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆಗ ಅವರ ತಾಯಿ ಚಾಸಾ.2 ರವರು ಅಡ್ಡ ಬಂದು ಯಾಕೆ ಈ ರೀತಿ ನನ್ನ ಮಗನನ್ನು ಬೈಯುತ್ತಿದ್ದೀರಾ ಎಂದು ಕೇಳಿದಾಗ ಆರೋಪಿತರಾದ ನೀವು ಚಾಸಾ.2ರವರನ್ನು ಜೋರಾಗಿ ತಳ್ಳಿದ್ದು, ಇದರಿಂದಾಗಿ ಚಾಸಾ.2ರವರು ಪ್ರಜ್ಞೆ ತಪ್ಪಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |

| | |
|---|---|
| ಪ್ರಶ್ನೆ 10: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಆರೋಪಿತರಾದ ನೀವು ಅವರನ್ನು ಎಳೆದುಕೊಂಡು ದೊಣ್ಣೆ ಮತ್ತು ಕಲ್ಲುಗಳಿಂದ ಮೈಕೈಗೆ ಹೊಡೆದು ನೋವುಂಟು ಮಾಡಿದ್ದಲ್ಲದೇ, ಅವರ ಕತ್ತು ಹಿಸುಕಿ ಉಸಿರುಗಟ್ಟಿಸಲು ಪ್ರಯತ್ನಿಸಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ 11: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆಗ ಅವರ ತಾಯಿ ಬಿಡಿಸಲು ಬಂದಾಗ, ನೀವುಗಳು ಅವರ ತಾಯಿಯ ಬಲಗೈಯನ್ನು ನುಲಿಚಿ ನೋವುಂಟು ಮಾಡಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ 12: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಅವರು ಚಾಸಾ.2ರವರನ್ನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆಗೆ ದಾಖಲಿಸಿದ್ದು, ತದನತಂತರ ವೈದ್ಯರ ಸಲಹೆಯ |

| | |
|---|---|
| | ಮೇರೆಗೆ ಹೊರಗಿನಿಂದ ಔಷಧಿ ತೆಗೆದುಕೊಂಡು ಬರಲೆಂದು ಅವರು ಆಸ್ಪತ್ರೆಯಿಂದ ಹೊರಗೆ ಬಂದಾಗ, ಆರೋಪಿತರಾದ ನೀವು ಪುನಃ ಬಂದು ಅವರನ್ನು ಉದ್ದೇಶಿಸಿ ನಿಮ್ಮ ಮೇಲೆ ಪೊಲೀಸ್ ಠಾಣೆಗೆ ದೂರು ಕೊಡುತ್ತೀಯಾ ಎಂದು ಹೇಳಿ ನಿಮ್ಮ ತಲೆಯಿಂದ ಅವರ ತಲೆಗೆ, ಮುಖಕ್ಕೆ ಗುದ್ದಿ, ತುಟಿಗೆ ಗಾಯ ಮಾಡಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ 13: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಈ ಬಗ್ಗೆ ಅವರು ಅವರ ಪತ್ನಿಗೆ ಕರೆ ಮಾಡಿ ತಿಳಿಸಿದ್ದು, ಅವರು ಬೆಳವಾಡಿಯ ಗೋಕುಲದಾಸ್ ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತಾರೆ, ಮಕ್ಕಳನ್ನು ಮನೆಯಲ್ಲಿ ನೋಡಿಕೊಳ್ಳಲು ಬೇರೆ ಯಾರು ಇರಲಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ 14: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ |

| | |
|---|---|
| | ಘಟನೆಯ ಬಗ್ಗೆ ಅವರು ದಿನಾಂಕಃ 02.12.2023ರಂದು ರಾತ್ರಿ 8.30 ಗಂಟೆಗೆ ಪೊಲೀಸ್ ಠಾಣೆಗೆ ಹೋಗಿ ನಿಪಿ.1ರ ದೂರನ್ನು ನೀಡಿದ್ದು, ಅವರ ಮೇಲೆ ಹಲ್ಲೆ ಮಾಡಿದ ಆರೋಪಿತರಾದ ನಿಮ್ಮನ್ನು ನೋಡಿದರೆ ಗುರುತಿಸುವುದಾಗಿ ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/- |
| ಆರೋಪಿ ನಂ.2 | ಸಹಿ/- |
| ಆರೋಪಿ ನಂ.3 | ಸಹಿ/- |
| ಪ್ರಶ್ನೆ 15: | ಪಿ.ಡಬ್ಲ್ಯೂ- 4 ಸಣ್ಣಮ್ಮ, ಇವರು ತಮ್ಮ ಸಾಕ್ಷ್ಯದಲ್ಲಿ, ಅವರಿಗೆ ಚಾಸಾ.1 ಸ್ವಾಮಿ, ಚಾಸಾ.3 ಯೋಗೇಶ್ ಮತ್ತು ಚಾಸಾ.4 ಜಯರಾಮ ಹಾಗೂ ಆರೋಪಿತರಾದ ನೀವು ಗೊತ್ತಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/- |
| ಆರೋಪಿ ನಂ.2 | ಸಹಿ/- |
| ಆರೋಪಿ ನಂ.3 | ಸಹಿ/- |
| ಪ್ರಶ್ನೆ 16: | ಇದೇ ಸಾಕ್ಷಿಯು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, 2 ವರ್ಷದ ಹಿಂದೆ ಬೆಳಿಗ್ಗೆ 7.30 ಗಂಟೆಗೆ ಅವರು ಅವರ ಮನೆಯಲ್ಲಿದ್ದಾಗ ಆರೋಪಿತರಾದ ನೀವು 3 ಜನ ಅವರ ಮನೆಯ ಹತ್ತಿರ ಗುಂಪು |

| | |
|---|---|
| | ಕಟ್ಟಿಕೊಂಡು ಬಂದು ಕೊಲೆ ಮಾಡುತ್ತೇವೆ ಬಿಡುವುದಿಲ್ಲ ಎಂದು ಹೇಳಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ:17 | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಚಾಸಾ.1ರವರಿಗೆ 2ನೇ ಆರೋಪಿಯಾದ ನೀವು ಸೊಂಟಕ್ಕೆ, ಕುತ್ತಿಗೆಗೆ ಹೊಡೆದಿದ್ದು, ಅದನ್ನು ಅವರು ಬಿಡಿಸಲು ಹೋದಾಗ ನೀವುಗಳು ಅವರಿಗೂ ಸಹ ಹೊಡೆದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ: 18 | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ 1ನೇ ಆರೋಪಿಯಾದ ನೀವು ಅವರನ್ನು ಕೆಳಕ್ಕೆ ಕೆಡವಿದಾಗ ಅವರು ಬಿದ್ದು ಹೋದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |

| | |
|---|---|
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ:19 | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆಗ ಚಾಸಾ.3 ಮತ್ತು ಚಾಸಾ.4ರವರು ಬಂದು ಜಗಳ ಬಿಡಿಸಿದ್ದು, ಅವರ ತಲೆಗೆ ಬಲ ಕೈಗೆ ಏಟಾಗಿದ್ದು, ಚಾಸಾ.1ರವರು ಅವರನ್ನು ಒಂದು ಆಟೋದಲ್ಲಿ ಹುಣಸೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ: 20 | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಪೊಲೀಸರು ಮಹಜರ್ ಸ್ಥಳಕ್ಕೆ ಬಂದು ಬೆಳಿಗ್ಗೆ 10 ರಿಂದ 11 ಗಂಟೆಯವರೆಗೆ ಮಹಜರು ಮಾಡಿದ್ದು, ಪೊಲೀಸರಿಗೆ ಘಟನಾ ಸ್ಥಳವನ್ನು ಅವರೇ ತೋರಿಸಿದ್ದು, ಆ ಸಮಯದಲ್ಲಿ ಚಾಸಾ.1 ಮತ್ತು ಚಾಸಾ.5 ಮಹಾದೇವರವರು ಹಾಜರಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |

| | |
|---|---|
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ: 21 | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರು ನಿಪಿ.2 ಮಹಜರಿನಲ್ಲಿರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ: 22 | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರು ಆರೋಪಿತರಾದ ನಿಮ್ಮನ್ನು ನೋಡಿ ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳ್ತುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ: 23 | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಘಟನೆಯ ಬಗ್ಗೆ ಅವರು ಪೊಲೀಸರ ಮುಂದೆ ಹೇಳಿಕೆ ನೀಡಿರುವುದಾಗಿ ಸಾಕ್ಷಿ |

| | |
|---|---|
| | ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ: 24 | ಪಿ.ಡಬ್ಲ್ಯೂ – 5 ಜಮೀರ್ ಅಹಮದ್, ಹುಣಸೂರು ಪಟ್ಟಣದ ಪಿ.ಎಸ್.ಐ., ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 02.12.2023ರಂದು ಅವರು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ.1ರವರು ಅವರು ಮುಂದೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ ಅದರ ಆಧಾರದ ಮೇಲೆ ಠಾಣಾ ಮೊಕದ್ದಮೆ ಸಂ.243/2023ರಲ್ಲಿ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ: 25 | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರು ಸ್ವೀಕರಿಸಿದ ನಿಪಿ.1 ದೂರು ಮತ್ತು ನಿಪಿರಥಮ ವರ್ತಮಾನ ವರದಿ |

| | |
|---|---|
| | ಇವುಗಳಲ್ಲಿರುವ ಅವರ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಪಿ.1(ಬಿ) ಮತ್ತು ನಿಪಿ.5(ಎ) ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ: 26 | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 03.12.2023ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದಾಗ ಕೃತ್ಯ ನಡೆದ ಸ್ಥಳವನುನ ತೋರಿಸಲು ಚಾಸಾ.1ರವರಾಗಲೀ, ಪ್ರತ್ಯಕ್ಷ ಸಾಕ್ಷಿದಾರರಾಗಲೀ ಲಭ್ಯವಿರಲಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ: 27 | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 07.12.2023ರಂದು ಪುನಃ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದಾಗ ಚಾಸಾ.2ರವರು ಹಾಜರಿದ್ದು ಸ್ಥಳ ತೋರಿಸಿದ ಮೇರೆಗೆ ಚಾಸಾ.5 ಮತ್ತು ಚಾಸಾ.6ರವರಿಗೆ ಪಂಚರಾಗಿ ಸಹಕರಿಸಲು ಮೌಖಿಕವಾಗಿ |

| | |
|---|---|
| | ಕೋರಿಕೊಂಡ ಮೇರೆಗೆ ಅವರು ಒಪ್ಪಿದರು ಎಂದು ಸಾಕ್ಷಿ ನುಡಿದಿರುತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ: 28 | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಚಾಸಾ.2, 5 ಮತ್ತು 6ರವರ ಸಮಕ್ಷಮ ಬೆಳಿಗ್ಗೆ 10 ರಿಂದ 11 ಗಂಟೆಗೆ ಸ್ಥಳ ಮಹಜರು ಕ್ರಮ ಜರುಗಿಸಿದ್ದು, ಸದರಿ ಮಹಜರ್ ನಲ್ಲಿರುವ ಅವರ ಸಹಿಯನ್ನು ನಿಪಿ.4(ಬಿ) ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ: 29 | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಅದೇ ದಿನ ಸಾಕ್ಷಿದಾರರಾದ ಚಾಸಾ.2 ಮತ್ತು ಚಾಸಾ.4ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುವುದಾಗಿ ಹಾಗೂ ಅವರಿಬ್ಬರೂ ಕೃತ್ಯಕ್ಕೆ ಅನುಗುಣವಾಗಿ ಹೇಳಿಕೆ ನೀಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |

| | |
|---|---|
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆಃ 30 | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 09.07.2023ರಂದು ಚಾಸಾ.2ರವರ ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿದ್ದು, ಸದರಿ ಗಾಯದ ಪ್ರಮಾಣ ಪತ್ರವನ್ನು ನಿಪಿ.6 ಎಂದು ಹಾಗೂ ಅದರಲ್ಲಿರುವ ಅವರ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಿಕೊಂಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆಃ 31 | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿತರಾದ ನಿಮ್ಮನ್ನು ಅವರ ಮುಂದೆ ಹಾಜರಾಗಿದ್ದು, ವಿಚಾರಣೆ ಮಾಡಿ ಕಳುಹಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |

| | |
|---|---|
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ: 32 | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರು ಈ ಹಂತದಲ್ಲಿ ತನಿಖೆ ಪೂರ್ಣಗೊಂಡ ಕಾರಣ ನಿಮ್ಮ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ: 33 | ಪಿ.ಡಬ್ಲ್ಯೂ – 6 ಡಾಃ ಪೂರ್ಣಿಮಾ, ಹುಣಸೂರು ಸಾರ್ವಜನಿಕ ಆಸ್ಪತ್ರೆಯ ವೈದ್ಯಾಧಿಕಾರಿ, ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 02.12.2023ರಂದು ಬೆಳಿಗ್ಗೆ 7.30 ಗಂಟೆಗೆ ಪರಿಚಯದ 3 ಜನರು ಕೈ ಮತ್ತು ಇಟ್ಟಿಗೆಯಿಂದ ಹೊಡೆದು ಹಲ್ಲೆಗೆ ಒಳಗಾದ ಹಿನ್ನಲೆಯಲ್ಲಿ ಚಾಸಾ.1ರವರು ಅವರ ಮುಂದೆ ಹಾಜರಾಗಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |

| | |
|---|---|
| ಪ್ರಶ್ನೆ: 34 | ಇದೇ ಸಾಕ್ಷಿಯು ಮುಂದುವರೆದು ಸಾಕ್ಷ್ಯದಲ್ಲಿ, ಸದರಿಯವರನ್ನು ಪರೀಕ್ಷಿಸಿದಾಗ ಅವರ ಬಲಭುಜದ ಮೇಲೆ, ಬಲ ಮಂಡಿಯ ಮೇಲೆ ಹಾಗೂ ಎದೆಯಲ್ಲಿ ನೋವಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ: 35 | ಇದೇ ಸಾಕ್ಷಿಯು ಮುಂದೆವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಗಾಯಗಳಿಗೆ ಯಾವುದೇ ಹೊರಗಾಯಗಳು ಕಂಡುಬರದೇ ಇದ್ದು, ಅವರನ್ನು ಒಳರೋಗಿಯಾಗಿ ದಾಖಲಿಸಿಕೊಂಡು ಮೂಳೆ ತಜ್ಞರಿಗೆ ರೆಫರ್ ಮಾಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ: 36 | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 02.12.2023ರಂದು ಅದೇ ದಿನ ರಾತ್ರಿ 11 ಗಂಟೆಗೆ ಗಾಯಾಳು ವೈದ್ಯಾಧಿಕಾರಿಯ ಸೂಚನೆಗೆ ವಿರುದ್ಧವಾಗಿ ಆಸ್ಪತ್ರೆಯಿಂದ ಹೊರಟು |

| | |
|---|---|
| | ಹೋಗಿದ್ದು, ಆದ್ದರಿಂದ ಅವರಿಗೆ ಹೊರ ಮತ್ತು ಒಳ ಗಾಯಗಳು ಆಗಿತ್ತೇ ಇಲ್ಲವೆ ಎಂಬ ಬಗ್ಗೆ ಪರೀಕ್ಷಿಸಲು ಆಗಲಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ: 37 | ಇದೇ ಸಾಕ್ಷಿಯು ಮುಂದೆವರೆದು ತಮ್ಮ ಸಾಕ್ಷ್ಯದಲ್ಲಿ, ಆ ಕಾರಣದಿಂದಾಗಿ ಮೇಲೆ ಹೇಳಿದ ಗಾಯಗಳು ಸಾಮಾನ್ಯ ಅಥವಾ ತೀವ್ರ ಸ್ವರೂಪದ್ದೆ ಎಂದು ಅಭಿಪ್ರಾಯಕ್ಕೆ ಬರಲು ಸಾಧ್ಯವಾಗದೇ ಇದ್ದ ಕಾರಣ ಅದೇ ರೀತಿಯಾಗಿ ನಿಪಿ.6ರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು, ಅದರಲ್ಲಿರುವ ಅವರ ಸಹಿಯನ್ನು ನಿಪಿ.6(ಬಿ) ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ 38: | ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ? |
| ಉತ್ತರ: | ಇಲ್ಲ |
| ಆರೋಪಿ ನಂ.1 | ಸಹಿ/– |

| | |
|---|---|
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |
| ಪ್ರಶ್ನೆ 39: | ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ? |
| ಉತ್ತರ: | ಇಲ್ಲ |
| ಆರೋಪಿ ನಂ.1 | ಸಹಿ/– |
| ಆರೋಪಿ ನಂ.2 | ಸಹಿ/– |
| ಆರೋಪಿ ನಂ.3 | ಸಹಿ/– |

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಮತ್ತು ಸರಿಯಾಗಿದೆಯೆಂದು ದೃಢೀಕರಿಸಿರುತ್ತೇನೆ.

ದಿನಾಂಕಃ 15.06.2026.

ಸಹಿ/–

(ಅನಿತ)

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ಹುಣಸೂರು.**